# ರಾಜೀನಾಮೆ ಪತ್ರ ವಿಚಾರಣೆಗೆ ದಿನ ನಿಗದಿಪಡಿಸಿದ ಸ್ಪೀಕರ್

**ಬೆಂಗಳೂರು:** ರಾಜೀನಾಮೆ ನೀಡಿರುವ 13 ಶಾಸಕರ ಪೈಕಿ 8 ಜನರ ರಾಜೀನಾಮೆ ಪತ್ರ ಕ್ರಮಬದ್ಧವಾಗಿಲ್ಲ ಎಂದು ಸ್ಪೀಕರ್ ರಮೇಶ್ ಕುಮಾರ್ ತೀರ್ಮಾನಿಸಿದ್ದು, ಪ್ರತಿಯೊಬ್ಬರೂ ತಮ್ಮನ್ನು ಖುದ್ದು ಭೇಟಿಯಾಗಿ ವಿವರಣೆ ನೀಡುವುದಕ್ಕೆ ದಿನಾಂಕ ನಿಗದಿ ಮಾಡಲು ನಿರ್ಧರಿಸಿದ್ದಾರೆ.



ತಮ್ಮ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಸ್ಪೀಕರ್, "ಆನಂದ್‌ಸಿಂಗ್, ಪ್ರತಾಪಗೌಡ ಪಾಟೀಲ್, ರಾಮಲಿಂಗಾ ರೆಡ್ಡಿ, ನಾರಾಯಣಗೌಡ, ಗೋಪಾಲಯ್ಯ ರಾಜೀನಾಮೆ ಪತ್ರಗಳು ಮಾತ್ರ ಕ್ರಮ ಬದ್ಧವಾಗಿವೆ. ಈ ಹಿನ್ನೆಲೆಯಲ್ಲಿ ಉಳಿದ ವರಿಗೆ ಸೂಚನಾ ಪತ್ರ ಕಳುಹಿಸಲಾಗಿದೆ. ಪ್ರತಿಯೊಬ್ಬರು ನನ್ನ ಮುಂದೆ ಖುದ್ದು ಹಾಜರಾಗಿ ರಾಜೀನಾಮೆ ಬಗ್ಗೆ ವಿವರಣೆ ನೀಡಬೇಕು," ಎಂದು ಹೇಳಿದರು. "ಕ್ರಮಬದ್ಧವಾಗಿ ಪತ್ರ ಸಲ್ಲಿಸಿದವರ ಪೈಕಿ ಆನಂದಸಿಂಗ್ ಹಾಗೂ ನಾರಾಯಣಗೌಡ ಅವರನ್ನು ಜುಲೈ 12ರಂದು ವಿಚಾರಣೆಗೆ ಕರೆದಿದ್ದೇನೆ. ಜುಲೈ 15ರಂದು ರಾಮಲಿಂಗಾ ರೆಡ್ಡಿ ಅವರನ್ನು ಆಹ್ವಾನಿಸುತ್ತೇನೆ," ಎಂದು ಹೇಳಿದರು. "ಕಾಂಗ್ರೆಸ್‌ನಿಂದ ದೂರು ಬಂದಿದೆ. ರಮೇಶ್ ಜಾರಕಿಹೊಳಿ ಸೇರಿ ಮೂವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ದೂರು ನೀಡಿದ್ದಾರೆ. ಅದೇ ರೀತಿ ಸಾರ್ವಜನಿಕರಿಂದಲೂ ದೂರು ಬಂದಿದೆ. ಈ ಬಗ್ಗೆ ವಿಚಾರಣೆ ನಡೆಸಿ ಕ್ರಮ ಕೈಗೊಳ್ಳಲಾಗುವುದು. ರಮೇಶ ಜಾರಕಿಹೊಳಿ ಹಾಗೂ ಮಹೇಶ್ ಕುಮಟಳ್ಳಿ ಅವರಿಗೆ ಜುಲೈ 11ರಂದು ವಾದ ಮಂಡಿಸಲು ಸೂಚನೆ ನೀಡಿದ್ದೇನೆ. ರೋಷನ್ ಬೇಗ್ ಅವರು ನನ್ನನ್ನು ಖುದ್ದು ಭೇಟಿ ಮಾಡಿ ರಾಜೀನಾಮೆ ಪತ್ರ ಸಲ್ಲಿಸಿದ್ದಾರೆ," ಎಂದು ವಿವರಿಸಿದರು.